ಶಿವಮೊಗ್ಗ ನಗರಕ್ಕೆ ಹೊಸ ಸಕ್ಕರೆ ಕಾರ್ಖಾನೆ ಪ್ರಾರಂಭಿಸುವುದು

224 (250) ಶ್ರೀ ಚಂದ್ರಶೇಖರಪ್ಪ ಹೆಚ್ ಎಂ (ಶಿವಮೊಗ್ಗ) ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿ ಖಾಸಗಿ ಕಬ್ಬು ಬೆಳಗಾರರ ಪುನಶ್ಚೇತನಕ್ಕಾಗಿ ಹೊಸದಾಗಿ ಖಾಸಗಿ ಅಥವಾ ಸರ್ಕಾರ ಒಡೆತನದ ಸಕ್ಕರೆ ಕಾರ್ಖಾನೆ ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ ಹಾಲಿ ಇರುವ ಮುಚ್ಚಿರುವ ದೇವಿ ಶುಗರ್ಸ್ ಕಂಪನಿ ಪುನಶ್ಚೇತನಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ

ಕಾರ್ಖಾನೆಗೆ ಗುತ್ತಿಗೆ ನೀಡಿರುವ ಸರ್ಕಾರಿ ಭೂಮಿಯನ್ನು ಹಿಂದಕ್ಕೆ ಪಡೆಯಲಾಗಿದೆಯೇ (ವಿವರ ನೀಡುವುದು)

ಆ) ಮುಚ್ಚಿರುವ ಶಿವಮೊಗ್ಗ ಸಕ್ಕರೆ ಕಾರ್ಖಾನೆಯಲ್ಲಿರುವ ಕಾರ್ಮಿಕರ ಹಿತರಕ್ಷಣೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ

ಕಾರ್ಮಿಕರಿಗೆ ಹಾಗೂ ಕಬ್ಬು ಬೆಳಗಾರರಿಗೆ ಮೇಲ್ಕಂಡ ಕಂಪನಿಯಿಂದ ಬರಬೇಕಾಗಿರುವ ಬಾಕಿ ವಸೂಲಾತಿ ಬಗ್ಗೆ ಸರಕಾರ ಯಾವ ಕ್ರಮ ಕೈಗೊಂಡಿದೆ

ಇ) ಶಿವಮೊಗ್ಗ ತಾಲ್ಲೂಕು ವ್ಯಾಪ್ತಿಯ ಕಬ್ಬು ಬೆಳೆಗಾರರ ಕಬ್ಬನ್ನು ಭದ್ರಾವತಿಯ ಎಂ ಪಿ ಕಾರ್ಖಾನೆಗೆ ಮಾರಾಟ ಮಾಡಲು ಅನುಮತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ (ವಿವರ ನೀಡುವುದು)

ಶ್ರೀ ಎಂ ಮಹಾದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಹಾಲಿ ಇರುವ ಸಕ್ಕರೆ ಕಾರ್ಖಾನೆಯ ಜೊತೆಗೆ ಖಾಸಗಿ ಒಡೆತನದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಹೊಸದಾಗಿ ಪ್ರಾರಂಭಿಸಲು ಸರ್ಕಾರವು ತಾತ್ವಿಕ ಅನುಮೋದನೆ ನೀಡಿದೆ ಸದ್ಯಕ್ಕೆ ಅಂತ ಆಲೋಚನೆ ಸರ್ಕಾರಕ್ಕೆ ಇಲ್ಲಾ

ಈ ಕಾರ್ಖಾನೆಗೆ ಗುತ್ತಿಗೆ ನೀಡಿದ್ದ 1503 11 ಎಕರೆ ಸರ್ಕಾರದ ಭೂಮಿಯನ್ನು ಲೀಜ್ ಅವಧಿ ನಂತರ ಜಿಲ್ಲಾಧಿಕಾರಿ ಆದೇಶ ಸಂಖ್ಯೆ ಸಿಆರ್‌ಎಫ್ ಸಿಆರ್ 150 79–89 ದಿನಾಂಕ 23–08–2001 ರಂತೆ ಹಿಂದಕ್ಕೆ ಪಡೆಯಲಾಗಿದೆ ವಿವರ ಈ ಕೆಳಕಂಡಂತೆ ಇರುತ್ತದೆ

ಕ್ರ ಸಂ	ಗ್ರಾಮದ ಹೆಸರು	ಸರ್ವೆ ನಂ	ವಿಸ್ತೀರ್ಣ (ಎಕರೆಗಳಲ್ಲಿ)
1	ಮಳಲಿ, ತರೀಕೆರೆ ತಾಲ್ಲೂಕ್	2.ಪಿ	354 00
2	ಚನ್ನಹಳ್ಳಿ	3 ಪಿ	340 00
3	ಹೆಚ್ ರಂಗಾಪುರ	12 ಪಿ	150 00
4	ಕಾರಹಳ್ಳಿ ಭದ್ರಾವತಿ ತಾ	8	225 00
		22	32 11
5	ಹಸೂರಿ, ಶಿವಮೊಗ್ಗ ತಾ	135	252 00
6	ಹಾಲಲಕ್ಕವಳ್ಳಿ, ಶಿವಮೊಗ್ಗ ತಾಲ್ಲೂಕು	2 36	150 00
	ಒಟ್ಟು		1503 11

ಆ) ಶಿವಮೊಗ್ಗದ ದೇವಿ ಶುಗರ್ಸ್ ಕಾರ್ಖಾನೆಯ ಕಬ್ಬು ಬೆಳೆಗಾರರ ಮತ್ತು ಕಾರ್ಮಿಕರ ಹಿತರಕ್ಷಣೆಗೆ ಸರ್ಕಾರವು ತಲಾ ರೂ 118,81,324 86 ಗಳ ಎಸ್.ಬಿ ಎಂ ಬ್ಯಾಂಕಿನ ಸಾಲಕ್ಕೆ ಗ್ಯಾರಂಟಿ ನೀಡಿರುತ್ತದೆ ಈ ಪೈಕಿ ರೂ 1,18,36 233 62 ಕಾರ್ಮಿಕರಿಗೆ ಪಾವತಿಸಿರುತ್ತದೆ. ಹಾಗೆಯೇ ರೂ 115,09,888 00ಗಳನ್ನು ಕಬ್ಬು ಬೆಳೆಗಾರರಿಗೆ ಪಾವತಿಸಿರುತ್ತದೆ

ಈಗಾಗಲೇ ಮೇಲಿನ ಕಂಡಿಕೆಯಲ್ಲಿ ಉತ್ತರ ನೀಡಿರುತ್ತದೆ

ಇ) ಶಿವಮೊಗ್ಗ ಮತ್ತು ಭದ್ರಾವತಿ ತಾಲ್ಲೂಕ್‌ಗಳ ವ್ಯಾಪ್ತಿಯ ಕಬ್ಬು ಬೆಳೆಗಾರರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಆ ಪ್ರದೇಶದಲ್ಲಿ ಬೆಳೆಯುವ ಕಬ್ಬನ್ನು ತಾತ್ಕಾಲಿಕವಾಗಿ ಭದ್ರಾವತಿಯ ಎಂ ಪಿ ಎಂ ಸಕ್ಕರೆ ಕಾರ್ಖಾನೆಗೆ ಸರಬರಾಜು ಮಾಡಲು ಸರ್ಕಾರವು ಅನುಮತಿ ನೀಡಿರುತ್ತದೆ

ಶಿವಮೊಗ್ಗ ತಾಲ್ಲೂಕಿನಲ್ಲಿ ನೂತನ ಪಶು ಆಸ್ಪತ್ರೆ ಹಾಗೂ ಔಷಧಿಗಳ ವಿವರ

225 (251) ಶ್ರೀ ಚಂದ್ರಶೇಖರಪ್ಪ ಹೆಚ್ ಎಂ (ಶಿವಮೊಗ್ಗ ಕ್ಷೇತ್ರ) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿರುವ ಪಶುಗಳ ಸಮೀಕ್ಷೆ ನಡೆಸಲಾಗಿದೆಯೇ ಹಾಗೂ ಇವುಗಳ ಸಂಖ್ಯೆಗೆ ಅನುಗುಣವಾಗಿ ಪಶುಚಿಕಿತ್ಸಾಲಯ ಕೇಂದ್ರಗಳ ಅನುಕೂಲ ಕಲ್ಪಿಸಲಾಗಿದೆಯೇ? ಶಿವಮೊಗ್ಗ ನಗರದ ವಿದ್ಯಾನಗರದಲ್ಲಿ ಹೊಸ ಪಶು ಚಿಕಿತ್ಸಾ ಕೇಂದ್ರ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ವಿವರ ನೀಡುವುದು?

ಆ) 1999 ರಿಂದ 2003 ರವರೆಗೆ ಸರ್ಕಾರದ ವತಿಯಿಂದ ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪಶು ಚಿಕಿತ್ಸಾ ಕೇಂದ್ರಕ್ಕೆ ಆಸ್ಪತ್ರೆಗಳಿಗೆ ಬಿಡುಗಡೆಗೊಳಿಸಲಾದ ಔಷಧಗಳ ಅನುದಾನದ ಮೊತ್ತವೆಷ್ಟು ವಿವರ ನೀಡುವುದು?

ಶ್ರೀ ಎಂ ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಸೆಪ್ಟೆಂಬರ್ – ಅಕ್ಟೋಬರ್ 2003 ರಲ್ಲಿ ನಡೆದ ಜಾನುವಾರು ಗಣತಿಯ ವಿವರಗಳನ್ನು ಅಂತಿಮಗೊಳಿಸಲಾಗುತ್ತಿದೆ 1997 ರ ಜಾನುವಾರುಗಳ ಗಣತಿ ಅಂಕಿಅಂಶಗಳ ಪ್ರಕಾರ ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ನಗರ ಪ್ರದೇಶದಲ್ಲಿ 12650 ಮತ್ತು ಗ್ರಾಮಾಂತರ ಪ್ರದೇಶದಲ್ಲಿ 27115 ಜಾನುವಾರುಗಳು ಇರುತ್ತವೆ ಇದಕ್ಕ ಅನುಗುಣವಾಗಿ 8 ಪಶುವೈದ್ಯ ಸಂಸ್ಥೆಗಳ ಅವಶ್ಯಕತೆಯಿದ್ದು ಈ ಹಾಲಿ 9 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ

ಆ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪಶು ಆಸ್ಪತ್ರೆ–1 ಪಶುಚಿಕಿತ್ಸಾಲಯ–3 ಮತ್ತು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು–5 ಒಟ್ಟು 9 ಕೇಂದ್ರಗಳಿಗೆ ಈ ಕೆಳಕಂಡ ಔಷಧಿಯನ್ನು ವಿವಿಧ ಮೂಲಗಳಿಂದ ಸರಬರಾಜು ಮಾಡಲಾಗಿದೆ

ಕ್ರ ಸಂ	ವಿವರ	1999–2000	2000–2001	2001–2002	2002–2003
1	ಸರ್ಕಾರದಿಂದ	ಇಲ್ಲ	229482	205100	211216
2	ಜಿಲ್ಲಾ ಪಂಚಾಯತ್‌ನಿಂದ	73841	85113	91354	160830